ದೃಷ್ಟಿಯಿಂದ, ಈ ಲೈಸೆನ್ಸ್‌ಗಳನ್ನು ಕೊಡುವುದರಲ್ಲೂ ಬಿಗಿ ಮಾಡಬೇಕು ಮತ್ತು ಇದನ್ನು ಬಹಳ ಕಟ್ಟುನಿಟ್ಟಾಗಿ ಎನ್‌ಫೋರ್ಸ್ ಮಾಡಲೇ ಬೇಕೆನ್ನುವ ಒಂದು ಸೂಚನೆಯನ್ನು ನಾನು ಈಗಾಗಲೇ ಕೊಟ್ಟಿದ್ದೇನೆ. ನಿರ್ದಿಷ್ಟ ಇನ್‌ಸ್ಟೆನ್ಸ್‌ಗಳನ್ನು ಮಾನ್ಯ ಸದಸ್ಯರು ಗಮನಕ್ಕೆ ತಂದರೆ ನಾನು ಅದರ ಬಗ್ಗೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ.

ಶ್ರೀ ಎನ್. ಯೋಗೀಶ್‌ಭಟ್ : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಸ್ಪಷ್ಟೀಕರಣ ಬೇಕಾಗಿದೆ. ಮಾನ್ಯ ಮಂತ್ರಿಗಳು ಏನು ಹೇಳಿಕೆಯನ್ನು ಕೊಡುತ್ತಿದ್ದಾರೆ ಅದರ ಬಗ್ಗೆ ಹೇಳುವುದಾದರೆ, ನಮ್ಮ ಜಿಲ್ಲೆಯಲ್ಲಿ ರಸ್ತೆ ಅಘಾತವಾಗಿ ಏಳೆಂಟು ಅರ್ಜಿಗಳಿದ್ದರೂ ಕೂಡ ಒಂದೇ ಒಂದಕ್ಕೆ ಪರಿಹಾರ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಕಾರಣವೇನೆಂದರೆ ಸ್ಪಷ್ಟವಾದ ಒಂದು ನಿರ್ದೇಶನವನ್ನು ಅಧಿಕಾರಿಗಳಿಂದ ಕೊಡುವುದಕ್ಕೆ ಸಾಧ್ಯವಾಗಲಿಲ್ಲ ಎನ್ನುವ ಕಾರಣದಲ್ಲಿ ಸನ್ಮಾನ್ಯ ಜಿಲ್ಲಾಧಿಕಾರಿಗಳು ನೇರವಾಗಿ ಪತ್ರವ್ಯವಹಾರ ಮಾಡಿದರೂ ಕೂಡ ಅದಕ್ಕೆ ಉತ್ತರ ಸಿಕ್ಕಿಲ್ಲ. ಕಳೆದ ವರ್ಷ ಆಟೋ ರಿಕ್ಷಾ ಚಾಲಕರಿಗೆ ಯಾವುದೇ ಪರಿಹಾರ ನಮ್ಮಲ್ಲಿ ಸಿಕ್ಕಿಲ್ಲ, ಸರ್ಕಾರ ಆದೇಶ ಬರೀ ಘೋಷಣೆಯಲ್ಲಿ ಮಾತ್ರ ಉಳಿದಿದೆ, ಇದರ ಬಗ್ಗೆ ವಿವರಣೆ ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಅದು ಘೋಷಣೆ ರೂಪದಲ್ಲಿಲ್ಲ, ಕಳೆದ ವರ್ಷ ಅದಕ್ಕೆ ಹಣವನ್ನು ಕೂಡ ಒದಗಿಸಿದ್ದೇವೆ. ಹದಿನೈದು ಪ್ರಕರಣಗಳು ಈ ರೀತಿ ವರದಿಯಾಗಿವೆ ಎನ್ನುವ ಒಂದು ವರದಿಯನ್ನು ನಮಗೆ ಅಧಿಕಾರಿಗಳು ತಿಳಿಸಿದ್ದಾರೆ. ಅದರಲ್ಲೇ ಅವರು ಹೇಳಿದ್ದುದು ಕೂಡ ಬರಬಹುದು. ಅಲ್ಲಿ ಅಪಘಾತವಾಗಿ, ಅವರು ಅಲ್ಲಿ ಸತ್ತಿದ್ದರೆ ಹಣ ಕೊಡುವುದರಲ್ಲಿ ಸ್ವಲ್ಪ ತಡವಾಗಿರಬಹುದು, ಕ್ಷಮೆ ಯಾಚಿಸಿ. ದುಡ್ಡನ್ನು ಕೊಡಿಸುತ್ತೇನೆ.

ಅಘನಾಶಿನಿ ನದಿಯಿಂದ ಚಿಪ್ಪು ತೆಗೆಯುವುದು.

143 - ಡಾ// ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಪರಿಸರ, ಜೀವಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಘನಾಶಿನಿ ನದಿಯಲ್ಲಿ ಚಿಪ್ಪು ತೆಗೆಯಲು ಪರವಾನಗಿ ಕೊಡಲಾಗಿದೆಯೇ?

ಆ) ಹಾಗಿದ್ದಲ್ಲಿ, ದೊಡ್ಡ ಪ್ರಮಾಣದಲ್ಲಿ ಚಿಪ್ಪು ತೆಗೆಯುವುದರಿಂದ ಪರಿಸರಕ್ಕೆ ಹಾನಿಯಾಗುವುದಿಲ್ಲವೆ?

ಶ್ರೀ ಬಸವರಾಜ್ ನೀ. ಶಿವಣ್ಣನವರ್ (ಪರಿಸರ, ಜೀವಶಾಸ್ತ್ರ,ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ರಾಜ್ಯಸಚಿವರು) :

ಅ) ಪರಿಸರ ಇಲಾಖೆಯು ಅನುಮತಿ ಕೊಟ್ಟಿಲ್ಲ. ಕೆಲವರು ಗಣಿ ಇಲಾಖೆಯ ಅನುಮತಿ

ಯಿಂದ ಚಿಪ್ಪು ತೆಗೆಯುತ್ತಿದ್ದು, ಇದನ್ನು ಏಕೆ ನಿಲ್ಲಿಸಬಾರದೆಂದು ಕಾರಣ ಕೇಳಿ ಇವರಿಗೆ ಮಾಲಿನ್ಯ ನಿಯಂತ್ರಣ ಮಂಡಳಿ ನೋಟೀಸ್ ಕೊಟ್ಟಿದೆ.

ಆ) ಈಗಾಗಲೇ ಕಾರಣ ಕೇಳುವ ನೋಟೀಸು ಕೊಟ್ಟಿದ್ದು ಇದು ಪರಿಸರಕ್ಕೆ ಹಾನಿಯುಂಟು ಮಾಡುವುದೆಂದು ಖಾತ್ರಿಯಾದರೆ ಇದನ್ನು ತಡೆಯಲು ಕಾನೂನು ಪ್ರಕಾರ ಕ್ರಮಕೈಗೊಳ್ಳಲಾಗುವುದು.

ಡಾ|| ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೆ, ನಾನು ಅಘನಾಶಿನಿ ನದಿಯಲ್ಲಿ ಚಿಪ್ಪು ತೆಗೆಯಲು ಪರವಾನಗಿ ಕೊಡಲಾಗಿದೆಯೇ ಎಂದು ಕೇಳಿದ್ದೆ, ಅದಕ್ಕೆ ಒಂಭತ್ತು ಪರವಾನಗಿ ಕೊಟ್ಟಿದ್ದೇವೆ, ಐದು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿಯನ್ನು ಪಡೆದಿರುವುದಿಲ್ಲವೆಂದು ಹೇಳಿದ್ದಾರೆ, ನಾನು ಅದರ ಬಗ್ಗೆ ಮಾತನಾಡುವುದಿಲ್ಲ ಸರ್ಕಾರ ಹೇಗೆ ಹೇಳುತ್ತದೆಯೋ ಹಾಗೆ ಕಾರ್ಯಸೂಚಿ, ದಿಕ್ಸೂಚಿಯಾಗುತ್ತದೆ. ಒಂದು ಡಿಪಾರ್ಟಮೆಂಟ್ ಕೇಳಿದರೆ ಮತ್ತೊಂದು ಡಿಪಾರ್ಟ್‌ಮೆಂಟ್ ಕೊಟ್ಟಿರುವುದು ಇಲ್ಲಿ ವೇದ್ಯವಾಗುತ್ತದೆ. ಹಾಗಿದ್ದಲ್ಲಿ ದೊಡ್ಡ ಪ್ರಮಾಣದಲ್ಲಿ ಚಿಪ್ಪು ತೆಗೆಯುವುದರಿಂದ ಪರಿಸರಕ್ಕೆ ಹಾನಿಯಾಗುವುದಿಲ್ಲವೆ? ಎಂದು ಕೇಳಿದ್ದೇನೆ, ಇಲ್ಲವೆಂದು ಉತ್ತರ ಕೊಟ್ಟಿದ್ದಾರೆ, ನಾವು ಈಗ ಟೈಗರ್ ಪ್ರಾಜೆಕ್ಟ್ ಮುಂತಾದ ಪ್ರಾಜೆಕ್ಟ್‌ಗಳನ್ನು ಮಾಡಿ ಜೀವ ರಕ್ಷಣೆ ಮಾಡುವುದಕ್ಕೆ ಅದು ಇರಬೇಕು ಪರಿಸರಕ್ಕೆ ತೊಂದರೆಯಾಗುತ್ತದೆ ಎನ್ನುವ ದೃಷ್ಟಿಯಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಈಗ ಓವರ್ ಎಕ್ಸ್‌ಪ್ಲಾಯಿಟ್ ಆಗುವುದರಿಂದ, ಇದು ಗಣಿಗಾರಿಕೆ ಎಂದು ಹೇಳಿದರೆ it is already over exploited- ಆಗ ತಾಯಿ ಇಲ್ಲದೆ ಮರಿ ಹೇಗೆ ಆಗುತ್ತದೆ ಅಥವಾ ಜೀವ ಪುನರಾವರ್ತನೆ ಹೇಗಾಗುತ್ತದೆ ಎನ್ನುವ ಪ್ರಶ್ನೆ ಬರುತ್ತದೆ. ಎಲ್ಲವನ್ನೂ ತೆಗೆದಾದ ಮೇಲೆ ಅಲ್ಲಿ ಮತ್ತೆ ಮರಿ ಹೇಗಾಗುತ್ತದೆ ಎನ್ನುವ ಪ್ರಶ್ನೆ ಬರುತ್ತದೆ. ಹಾಗೆ ದೊಡ್ಡ ಪ್ರಮಾಣದಲ್ಲಿ ಚಿಪ್ಪು ತೆಗೆಯುವುದರಿಂದ ಮಣ್ಣಿನ ಗುಣ ಕೂಡ ಬದಲಾವಣೆಯಾಗುತ್ತದೆಂದು ಹೇಳುವುದು ಅನುಭವದಿಂದ ವೇದ್ಯವಾಗಿದೆ. ಹಾಗಿರಬೇಕಾದರೆ, ಮಣ್ಣಿನ ಗುಣ ಬದಲಾವಣೆಯಾದ ಮೇಲೆ ಮತ್ತೆ ಚಿಪ್ಪು ಪುನರ್ ಉತ್ಪಾದನೆಯಾಗುವುದಿಲ್ಲ ಇದನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳುತ್ತದೆಯೇ? ಇದಲ್ಲದೆ ಇದು ಬಾಕಿ ಗಣಿಕಾರಿಕೆಗಿಂತ ವಿಭಿನ್ನವಾಗಿರುವ ವಿಷಯ, ಇದರ ಮೇಲೆ ಅವಲಂಬಿಸಿರುವ ಸಾವಿರಾರು ಕುಟುಂಬಗಳು ಚಿಪ್ಪು ತೆಗೆದು ಜೀವನ ಮಾಡುತ್ತಿದ್ದಾರೆ. ಅದಲ್ಲದೆ ಇದು ಬಡಜನ ತೆಗೆದುಕೊಳ್ಳತಕ್ಕಂಥ ಆಹಾರ, ಗೋವಾ ಬೇರೆ ಬೇರೆ ಕಡೆಗಳಿಗೆ ಇದು ರಫ್ತಾಗುತ್ತದೆ. ರಫ್ತಾಗತಕ್ಕಂಥ ಈ ಬಡಜನರ ಆಹಾರವನ್ನು ನಾವು ಕಸಿದಂತಾಗುತ್ತದೆ. ಈ ಎರಡೂ ಕಾರಣಗಳಿಂದ ಇದನ್ನು ನಿಲ್ಲಿಸಲಾಗುತ್ತದೆಯೇ? ಮತ್ತೆ, ಈಗ ಹೊರಗೆ ತೆಗೆಯುವಂಥ ಬಿಳಿ ಚಿಪ್ಪುಗಳು ವಲಯದ ಹೊರಗೆ ಬಳಸತಕ್ಕಂಥ ವಸ್ತುವಾಗಿದೆ ಎಂದು ಹೇಳಿದ್ದಾರೆ. ಇದೇ ಚಿಪ್ಪು ನಮ್ಮಲ್ಲಿ ನೆಲದಲಿಯೂ ಲಭ್ಯವಿದೆ, ಅದನ್ನು ಕೂಡ ಖನಿಜವಾಗಿ ತೆಗೆಯುತ್ತಾರೆ. ಹಾಗಿದ್ದಾಗ ಆಲ್ಟರ್ನೇಟಿವ್ ಇದ್ದಾಗ ಇದನ್ನು ಎಕ್ಸ್‌ಪ್ಲಾಯಿಟ್ ಷ್ಟಾಡತಕ್ಕಂಥ ಅಗತ್ಯವಿದೆಯೆ ಎನ್ನುವ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಬಸವರಾಜ್ ನೀಲಪ್ಪ ಶಿವಣ್ಣನವರ್ : ಮಾನ್ಯ ಅಧ್ಯಕ್ಷರೆ, ಇದು ಸಾಮಾನ್ಯವಾಗಿ ನದಿ ಮುಖಜ ಪ್ರದೇಶಗಳಲ್ಲಿರತಕ್ಕಂಥ ಖನಿಜ. ಮತ್ತೆ ಇದು ಪ್ರತಿ ವರ್ಷ ಪುನರಾವರ್ತನೆಯಾಗುವುದರಿಂದ ಇದನ್ನು ತೆಗೆಯುವುದರಿಂದ ಪರಿಸರಕ್ಕೆ ಯಾವುದೇ ಹಾನಿಯಾಗುವುದಿಲ್ಲವೆನ್ನುವ ಅಭಿಪ್ರಾಯದಿಂದ ಈ

ಒಂದು ಪ್ರಕೃತಿದತ್ತವಾದ ಕೊಡುಗೆಯನ್ನು ರಾಜ್ಯದ ಹಿತದೃಷ್ಟಿಯಿಂದ ಉಪಯೋಗ ಮಾಡುವುದು ಸೂಕ್ತವೆನ್ನುವುದು ನನ್ನ ಅಭಿಪ್ರಾಯವಾಗಿದೆ. ಅದರ ಜೊತೆಗೆ ಇಲ್ಲಿ ಮತ್ತೊಂದು ಏನಾಗಿದೆ ಎಂದರೆ, ಕೇಂದ್ರ ಸರ್ಕಾರದ ಪರಿಸರ ಇಲಾಖೆಯ ವತಿಯಿಂದ ಈ ಒಂದು ಖನಿಜವನ್ನು ತೆಗೆಯುವುದಕ್ಕೆ ವಿನಾಯಿತಿ ನೀಡಿದ್ದರಿಂದ, ಒಪ್ಪಿಗೆ ಕೊಟ್ಟಿದ್ದರಿಂದ, ಇದು ಪರಿಸರಕ್ಕೆ ಏನೂ ಹಾನಿಯಾಗುವುದಿಲ್ಲವೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ. ಆದರೂ ಕೂಡ ಮಾನ್ಯ ಸದಸ್ಯರು ಏನೊಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ, ಆ ಕುರಿತು ತಜ್ಞರನ್ನು ಸ್ಥಳಕ್ಕೆ ಕಳುಹಿಸಿಕೊಟ್ಟು, ಅಲ್ಲಿ ಪರಿಸರಕ್ಕೆ ಹಾನಿಯಾಗುತ್ತದೆಂದು ಕಂಡುಬಂದರೆ ಅದರ ಬಗ್ಗೆ ಕಾನೂನು ರೀತ್ಯಾ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಡಾ// ಎಂ. ಪಿ. ಕರ್ಕಿ : ಎಷ್ಟು ದಿವಸಗಳಲ್ಲಿ ಮಾಡುತ್ತಾರೆ, ಏಕೆಂದರೆ ಓವರ್ ಎಕ್ಸ್‌ಪ್ಲಾಯಿಟ್ ಮಾಡಿ ತೆಗೆಯುವುದರಿಂದ ಅಲ್ಲಿ ಏನೂ ಉಳಿಯುವುದಿಲ್ಲ.

ಶ್ರೀ ಬಸವರಾಜ್ ನೀಲಪ್ಪ ಶಿವಣ್ಣನವರ್ : ಆದಷ್ಟು ಬೇಗ ಮಾಡಿಸುತ್ತೇನೆ.

ಡಾ// ಎಂ. ಪಿ. ಕರ್ಕಿ : ಆದಷ್ಟು ಬೇಗ ಎಂದರೆ, ಎಷ್ಟು ಕಾಲಾವಧಿ? ಮೂರು ತಿಂಗಳು ಎಂದಾದರೂ ಹೇಳಬೇಕಲ್ಲ, ಆದಷ್ಟು ಬೇಗ ಎಂದರೆ ನಾಲ್ಕು ವರ್ಷಬೇಕಾದರೆ ಆಗಬಹುದು.

ಶ್ರೀ ಕೆ.ಎನ್. ನಾಗೇಗೌಡ : ಇಷ್ಟೇ ದಿವಸವೆಂದು ಹೇಳುವುದಕ್ಕಾಗುತ್ತದೆಯೇ ಆದಷ್ಟು ಬೇಗ ಮಾಡುತ್ತಾರೆ.

ಅಧ್ಯಕ್ಷರು : ಒಂದು ಮೂರು ತಿಂಗಳ ಸಮಯವನ್ನು ಕೊಡಿ.

ಡಾ: ಎಂ. ಪಿ. ಕರ್ಕಿ : ಅವರು ಅದಕ್ಕೆ ಒಪ್ಪಿಕೊಳ್ಳುತ್ತಾರೆಯೇ?

ಶ್ರೀ ಬಸವರಾಜ್ ನೀಲಪ್ಪ ಶಿವಣ್ಣನವರ್ : ಆಗತ್ಯವಾಗಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 174 (1415)ಕ್ಕೆ ಸಚಿವರಿಂದ ವಿವರ

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಆಗಲೇ ಪುಟ್ಟಣ್ಣಯ್ಯನವರ ಪ್ರಶ್ನೆಗೆ ವಿವರಗಳನ್ನು ಒದಗಿಸುತ್ತೇನೆಂದು ಹೇಳಿದ್ದೆ, ನನ್ನ ಹತ್ತಿರ ಈಗಾಗಲೇ ಜಿಲ್ಲಾಮಟ್ಟದಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ, ಎಷ್ಟು ಖರ್ಚಾಗಿದೆ ಎನ್ನುವ ಬಗ್ಗೆ ವಿವರ ಇದೆ. ಅದರ ಪ್ರಕಾರ ಈ ಆರಾಧನಾ ಯೋಜನೆ 1990-91ನೇ ಇಸವಿಯಲ್ಲಿ ಆರಂಭವಾಗಿ ಇಲ್ಲಿಯವರೆಗೆ ಇಪ್ಪತ್ತು ಜಿಲ್ಲೆಗಳಿಗೆ ಇಪ್ಪತ್ತೊಂಭತ್ತು ಕೋಟಿ ಇಪ್ಪತ್ತೊಂದು ಲಕ್ಷ ರೂಪಾಯಿಗಳ ಹಣ ಬಿಡುಗಡೆಯಾಗಿದೆ, ಅದರಲ್ಲಿ ಹನ್ನೆರಡು ಕೋಟಿ, ಎಂಭತ್ತೆರಡು ಲಕ್ಷ ಚಿಲ್ಲರೆ ರೂಪಾಯಿಗಳು ಖರ್ಚಾಗಿದೆ, ಬಾಕಿ ಹದಿನಾರು ಕೋಟಿ ಮೂವತ್ತೆಂಟು ಲಕ್ಷ, ತೊಂಭತ್ತಾರು ಸಾವಿರದ ಒಂದುನೂರು ಆರು ರೂಪಾಯಿಗಳ ಹಣ ಖರ್ಚಾಗದೆ ಬಾಕಿ ಉಳಿದಿದೆ ಇದನ್ನು ನಾನು ತಮ್ಮ ಮೂಲಕ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.